ಇ) *ಯೋಜನೆಯು ಯಾವಾಗ ಮುಗಿಯುತ್ತದೆ?*

ಈ) *ಕರ್ನಾಟಕ ಸರಕಾರದ ಈಗಿನವರೆಗಿನ ನೀಡಿರುವ ಹಣವೆಷ್ಟು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಕರ್ನಾಟಕದಲ್ಲಿ ಉಪಯೋಗಿಸುವ ನೀರಿನ ಪಾಲು 4 ಟಿ.ಎಂ.ಸಿ.

ಇ) ಈ ಯೋಜನೆಯನ್ನು 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸುವ ಉದ್ದೇಶವಿದೆ.

ಈ) ಈಗಿನ ಅಂದಾಜಿನ ಪ್ರಕಾರ ಈ ಯೋಜನೆಗೆ ತಗಲುವ ವೆಚ್ಚದಲ್ಲಿ ಕರ್ನಾಟಕದ ಪಾಲು ರೂ.26.00 ಕೋಟಿ. ಇದುವರೆವಿಗೆ 4.07 ಕೋಟಿ ರೂ.ಗಳನ್ನು ಮಹಾರಾಷ್ಟ್ರ ಸರಕಾರಕ್ಕೆ ಪಾವತಿ ಮಾಡಲಾಗಿದೆ.

ಕುಲದೀಪ್‌ಸಿಂಗ್ ಆಯೋಗದ ಬಗ್ಗೆ

1094 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಂದ್ರ ಸರ್ಕಾರವು ಕುಲ್‌ದೀಪ್‌ಸಿಂಗ್ ಆಯೋಗದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳಿಸಲಾಗಿದೆಯೇ?*

ಆ) *ಹಾಗಿದ್ದರೆ, ಯಾವಾಗ ಮತ್ತು ಯಾವ ನಿರ್ದೇಶನದ ಮೇರೆಗೆ?*

ಇ) *ಆಯೋಗದ ಶಿಫಾರಸ್ಸು ಮತ್ತು ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಸರ್ಕಾರ ಕೈಗೊಂಡ ಕ್ರಮ ಏನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ದಿನಾಂಕ 10.1.1991ರಂದು ಸೂಕ್ತ ಕ್ರಮ ತೆಗೆದುಕೊಳ್ಳಲು ಕಳಿಸಲಾಗಿದೆ.

ಇ) ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರು ಕಾಗದದ ಕಾರ್ಖಾನೆ

189 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಕಾಗದದ ಕಾರ್ಖಾನೆಯಲ್ಲಿ ಸುಟ್ಟ ಸುಣ್ಣವನ್ನು ಹೊರಗಿನ ಸರಬರಾಜುದಾರರಿಂದ ಕೊಂಡುಕೊಳ್ಳಲು ಟೆಂಡರುಗಳನ್ನು ಕರೆಯುವ ಕಾರ್ಯಕ್ರಮವಿದೆಯೆ? ಹಾಗಿದ್ದಲ್ಲಿ, ಎಷ್ಟು ಟೆಂಡರುಗಳು ಬಂದಿವೆ ವಿವರಗಳನ್ನು ಕೊಡುವುದು.*

ಆ) *ವಿವಿಧ ಜಾತಿಯ ಸುಣ್ಣಕ್ಕೆ ಹಣವನ್ನು ಪಾವತಿ ಮಾಡುವ ಕರಾರುಗಳು ಬಂದಿವೆಯೇ? (ವಿವರ ನೀಡುವುದು)*

ಇ) *ಸರಬರಾಜುದಾರರು ಲ್ಯಾಬರೇಟರಿ ಅಧಿಕಾರಿಗಳ ಮೇಲೆ ಸರಬರಾಜು ಮಾಡಿದ ಸುಣ್ಣದಲ್ಲಿ ಸಿ.ಎ.ಓ.ನ್ನು ಹೆಚ್ಚು ಶೇಕಡಾವಾರು ತೋರಿಸುವಂತೆ ಒತ್ತಡ ತಂದಿರುವ ಬಗ್ಗೆ ದೂರುಗಳು ಬಂದಿವೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಕಂಪೆನಿಯವರು ಏನು ಕ್ರಮ ತೆಗೆದುಕೊಂಡಿದ್ದಾರೆ?*

ಈ) *ಮೈಸೂರು ಕಾಗದದ ಕಾರ್ಖಾನೆಗೆ 1985ರಿಂದೀಚೆಗೆ ಸರಬರಾಜು ಮಾಡಿದ ವಿವಿಧ ದರ್ಜೆಯ ಸುಣ್ಣದ ಬಗ್ಗೆ ವಿವರ ಕೊಡುವುದು?*